# ಕಣ್ಣಿನಲ್ಲೇ ಕಾಡಬೇಕು; ಆ ಪಾತ್ರ ನಾನಾಗಬೇಕು

**‘ಮ್ಯಾನ್ ಆಫ್ ದಿ ಮ್ಯಾಚ್’, ‘ಗುರುದೇವ್ ಹೊಯ್ಸಳ’ ಸಿನಿಮಾಗಳಲ್ಲಿ ಅಭಿನಯಿಸಿದ್ದ ಮಯೂರಿ ನಟರಾಜ್ ಇದೀಗ ‘ಇಬ್ಬನಿ ತಬ್ಬಿದ ಇಳೆಯಲಿ’ ಚಿತ್ರದಲ್ಲಿ ರಾಧೆಯಾಗಿದ್ದಾರೆ. ಕಣ್ಣಿನಲ್ಲೇ ಮಾತಾಡುವಂಥ ಪಾತ್ರಗಳು ಎಂದಿಗೂ ಅವರ ಆದ್ಯತೆಯಂತೆ.**

**■ ಸುಮಲತಾ ಎನ್**



‘ಮಾತನಾಡುತ್ತಾ ಅಭಿನಯಿಸುವುದು, ಚಲನೆ ಮೂಲಕ ಅಭಿವ್ಯಕ್ತಿಸುವುದು ನಟನೆಯ ಒಂದು ಆಯಾಮವಾದರೆ, ಕಣ್ಣಿನಲ್ಲೇ, ಮೌನದಲ್ಲೇ ಮಾತಾಡುವುದು ಮತ್ತೊಂದು ಆಯಾಮ. ಈ ಆಯಾಮವೇ ನನಗೆ ಸವಾಲು, ಆಕರ್ಷಕ. ಮಾತನಾಡದೇ ಎಲ್ಲವನ್ನೂ ಹೇಳಿಬಿಡುವಂಥ ಪಾತ್ರಗಳು ನನ್ನನ್ನು ಯಾವತ್ತಿಗೂ ಸೆಳೆಯುತ್ತವೆ...’

‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿ ರಾಧೆಯಾಗಿ ಕಾಣಿಸಿಕೊಂಡಿರುವ ನಟಿ ಮಯೂರಿ ನಟರಾಜ್, ನಟನೆಯ ಬಗ್ಗೆ ತಮ್ಮದೇ ರೀತಿಯಲ್ಲಿ ಹೀಗೊಂದು ಸುಂದರ ವಿವರಣೆ ನೀಡುತ್ತಾರೆ.

ಬಯೋಟೆಕ್ನಾಲಜಿ ಓದಿ, ಕಿರುಚಿತ್ರದ ಮೂಲಕ ಸಿನಿಮಾರಂಗಕ್ಕೆ ಬಂದ ಮಯೂರಿ ಮೊಟ್ಟ ಮೊದಲ ಬಾರಿ ಕಾಣಿಸಿಕೊಂಡಿದ್ದು ‘ಫಾಲೆನ್’ ಸಿನಿಮಾದಲ್ಲಿ. ನಂತರ ‘ಮ್ಯಾನ್ ಆಫ್ ದಿ ಮ್ಯಾಚ್’, ‘ಗುರುದೇವ್ ಹೊಯ್ಸಳ’ ಸಿನಿಮಾದಲ್ಲಿ ನಟಿಸಿದರು. ಇದೀಗ ಅವರ ಮೂರನೇ ಹೆಜ್ಜೆಯೇ ‘ಇಬ್ಬನಿ ತಬ್ಬಿದ ಇಳೆಯಲಿ’.

ಸಂಖ್ಯೆಯ ಹಿಂದೆ ಓಡದೇ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂಬ ನಿಯಮವನ್ನು ಮಯೂರಿ ತಮ್ಮ ಸಿನಿ ಬದುಕಿಗೆ ಅನ್ವಯಿಸಿಕೊಂಡಿದ್ದಾರೆ. ಹೀಗಾಗಿಯೇ ಅವಕಾಶಗಳ ಬೆನ್ನು ಬೀಳದೆ ತಾಳ್ಮೆಯಿಂದ ಕಥೆಗಳಿಗೆ ಗಮನ ನೀಡುವುದಾಗಿ ಹೇಳುತ್ತಾರೆ. ಅವರ ಪ್ರಕಾರ, ಹುರುಳಿಲ್ಲದ ಹತ್ತು ಸಿನಿಮಾ ಮಾಡುವುದು ಸುಂದರ ಕಥೆಯ ಒಂದು ಸಿನಿಮಾ ಮಾಡುವುದಕ್ಕೆ ಸಮ.

‘ಒಂದು ಸಿನಿಮಾ ಕಥೆ ಚೆನ್ನಾಗಿದ್ದರೆ ಎಷ್ಟೋ ವರ್ಷಗಳ ನಂತರವೂ ಜನರ ಮನಸ್ಸಿನಲ್ಲಿರುತ್ತದೆ. ಹಾಗೆ ಮನಸ್ಸಿನಲ್ಲಿ ಉಳಿಯುವಂಥ ಸಿನಿಮಾ, ಪಾತ್ರವೇ ನನಗೆ ಮುಖ್ಯ. ಸಿನಿಮಾ ನೋಡಿದವರನ್ನು ನನ್ನ ಪಾತ್ರ ಕಾಡಬೇಕು’ ಎಂದು ನಗುತ್ತಾರೆ. ತಮ್ಮ ಮೂರನೇ ಸಿನಿಮಾದಲ್ಲೂ ಅಂಥ ಪಾತ್ರವೇ ಇರುವುದಾಗಿ ಹೇಳುತ್ತಾರೆ.

“ನೋಡಿದ ತಕ್ಷಣ ಅಕ್ಕರೆ ಉಕ್ಕುವಂಥ ಪಾತ್ರವಿದು. ಸಿನಿಮಾದಲ್ಲಿ ನನ್ನ ಪಾತ್ರ ನವಿರಾಗಿರಬೇಕಿತ್ತು. ಜೊತೆಗೆ, ‘ಗುರುದೇವ್ ಹೊಯ್ಸಳ’ ಸಿನಿಮಾ ಮಾಸ್ ಕಮರ್ಷಿಯಲ್ ಆಗಿತ್ತು. ಅದಾದ ನಂತರ ಬೇರೆ ಜಾನರ್ ಪ್ರಯತ್ನಿಸಬೇಕು ಎನಿಸಿತ್ತು. ಹೀಗಾಗಿ ಈ ರೊಮ್ಯಾಂಟಿಕ್ ಡ್ರಾಮಾ ಇಷ್ಟಪಟ್ಟೆ” ಎನ್ನುತ್ತಾರೆ.

ಪಾತ್ರದೊಂದಿಗೆ, ಕಥೆಯ ಬಗ್ಗೆಯೂ ಮಯೂರಿ ಅವರ ಆಲೋಚನೆ ಆಸಕ್ತಿದಾಯಕವಾಗಿದೆ. ‘ಕಥೆಯಲ್ಲಿ ಹೊಸತನ ಇರಬೇಕು. ಆದರೆ ಎಲ್ಲ ರೀತಿಯ, ಎಲ್ಲ ಜಾನರ್‌ನ ಸಾವಿರಾರು ಸಿನಿಮಾಗಳು ಬಂದಿವೆ. ಹೀಗಿದ್ದಾಗ, ಪ್ರೇಕ್ಷಕರಿಗೆ ಈ ಸಿನಿಮಾದಲ್ಲಿ ಹೊಸತು ಇನ್ನೇನಿರಬಹುದು ಎಂಬ ಪ್ರಶ್ನೆ ಇರುತ್ತದೆ. ಉದಾಹರಣೆಗೆ, ಸಾವಿರಾರು ಲವ್ ಸ್ಟೋರಿ ಸಿನಿಮಾಗಳು ಬಂದಿವೆ. ಇದರಲ್ಲಿ ಹೊಸತೇನಿದೆ ಎನ್ನುವ ಪ್ರಶ್ನೆಯೇ ನೋಡುಗರಲ್ಲಿರುತ್ತದೆ. ಹೀಗಿದ್ದಾಗ ಆ ಕಥೆಯನ್ನು ಹೇಗೆ ತೋರಿಸುತ್ತೇವೆ ಎನ್ನುವುದು ಸವಾಲು. ಟೆಂಪ್ಲೇಟ್ ಒಂದೇ ಇದ್ದರೂ ಪಾತ್ರಗಳ ಟ್ರೀಟ್‌ಮೆಂಟ್ ಮೇಲೆ ಕಥೆಯ ವಿನ್ಯಾಸ ಬದಲಾಗುತ್ತದೆ’ ಎಂದು ವಿವರಿಸುತ್ತಾರೆ.

ತಾವು ನಿರ್ವಹಿಸಬೇಕಾದ ಪಾತ್ರ, ಸಿನಿಮಾಗಳ ಕುರಿತು ತಮಗೆ ನಿರ್ದಿಷ್ಟ ಮಾನದಂಡವಿಲ್ಲದಿದ್ದರೂ ಸರಳ ಸೂತ್ರವೊಂದನ್ನು ಅನುಸರಿಸುವುದಾಗಿ ಹೇಳುತ್ತಾರೆ ಅವರು.

‘ಸಿನಿಮಾದಲ್ಲಿ ಸುಮ್ಮನೆ ಒಂದು ಪಾತ್ರ ಇರಲಿ ಎಂದು ಆ ಪಾತ್ರ ಸೃಷ್ಟಿಸಿದ್ದರೆ ಒಪ್ಪಿಗೆ ಆಗುವುದಿಲ್ಲ. ಕಥೆ ಕೇಳುತ್ತಿದ್ದಂತೆ, ಈ ಪಾತ್ರವನ್ನು ತೆಗೆದರೆ ಈ ಕಥೆ ಇದೇ ರೀತಿ ಇರುತ್ತದಾ ಎಂಬುದನ್ನು ಮೊದಲು ನೋಡುತ್ತೇನೆ. ಅದೇ ರೀತಿ ಸಾಗುತ್ತದೆ ಎಂದರೆ ಆ ಪಾತ್ರ ಮಾಡಿ ಪ್ರಯೋಜನವಿಲ್ಲ. ಈ ಪಾತ್ರವೇ ಇಲ್ಲದೇ ಕಥೆ ಹೇಳಿಬಿಡಬಹುದು ಎನ್ನುವುದಾದರೆ ನೋಡುಗರಿಗೂ ಇದೇ ಭಾವ ಬರುತ್ತದೆ. ಈ ಪಾತ್ರದಿಂದ ಕಥೆ ಸಾಕಷ್ಟು ತಿರುವು ತೆಗೆದುಕೊಳ್ಳುತ್ತದೆ, ಕಥೆಗೆ ಈ ಪಾತ್ರ ಕೊಡುಗೆ ನೀಡುತ್ತಿದೆ ಎಂದಾಗ ಆಸಕ್ತಿದಾಯಕವಾಗಿರುತ್ತದೆ. ಅದನ್ನು ನಾನು ಖಂಡಿತ ಮಾಡುತ್ತೇನೆ, ದೊಡ್ಡ ಪಾತ್ರ, ಚಿಕ್ಕ ಪಾತ್ರ ಎಂಬ ಯಾವುದೇ ಸಂಕೋಚವಿಲ್ಲದೆ’ ಎಂದು ಮಾತು ಸೇರಿಸುತ್ತಾರೆ. ■